# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 57/ 2019

ಸಿಡಬ್ಲ್ಯೂ: 1
ಪಿಡಬ್ಲ್ಯೂ:1

<u>ದಿನಾಂಕಃ **29-06-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | |
|---|---|
| ಸಾಕ್ಷಿಯ ಹೆಸರು | - ಜ್ಯೋತಿ |
| ತಂದೆಯ/ಗಂಡನ ಹೆಸರು | - ಜಾನಪಾಲ್ |
| ವಯಸ್ಸು | **-?35** ವರ್ಷ |
| ಉದ್ಯೋಗ | - ಮನೆ ಕೆಲಸ |
| ವಾಸಸ್ಥಳಃ | - ನಜರತ್ ಕಾಲೋನಿ , ಯಾದಗಿರಿ |

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಚಾಸಾಃ 5,6 , 17 ರಿಂದ 22 ರವರು ನನ್ನ ಸಂಬಧಿಕರು ಇದ್ದು , ಚಾಸಾಃ23 ನನ್ನ ಮಗ ಇರುತ್ತಾನೆ. 1 ಮತ್ತು 2 ನೇ ಆರೋಪಿತರನ್ನು ನೋಡಿರುತ್ತೇನೆ.

ಅಪಘಾತದಲ್ಲಿ ಮೃತಪಟ್ಟ ಜಾನಪಾಲ ನನ್ನ ಗಂಡ ಇದ್ದು , ಸ್ಟಿಫನ ನನ್ನ ಮಗ ಇರುತ್ತಾನೆ. ದಿಃ31-05-2018 ರಂದು ನಾವು ಸಂಜೆ ಪಾರ್ಥನೆಗಾಗಿ ಗಾಜರಕೋಟ ಚರ್ಚಿಗೆ ನಾನು , ನನ್ನ ಗಂಡ , ನನ್ನ ಮಕ್ಕಳು , ನನ್ನ ಸಹೋದರಿಯ ಮಗಳು , ದೇವರಾಜ ಮತ್ತು ಅವರ ಪತ್ನಿ ಚಂದ್ರಕಲಾ, ಶಿಲ್ಪಾರಾಣಿ , ಶ್ವೇತಾರಾಣಿ , ವನಿತಾ ಎಲ್ಲರೂ ಸೇರಿ ಮಿಲಟರಿ ಕಮಾಂಡೋ ಜೀಪನಲ್ಲಿ ಹೋಗಿ ಬರುತ್ತಿದ್ದೇವು. ಮುಂಡರಗಿ ಆಶನಾಳ ಗೇಟ್ ನಲ್ಲಿ ಬೂದಿ ಟ್ಯಾಂಕರ ಬಂದು ನಮ್ಮ ಜೀಪಗೆ ಹೊಡೆದುಕೊಂಡು ಹೋಗಿರುತ್ತದೆ. ನಮಗೆಲ್ಲಾ ಗಾಯಗಳು ಆಗಿರುತ್ತವೆ. ನನ್ನ ಎದೆಯ ಒಳಗಡೆ ಎಲುಬು ಮುರಿದಿತ್ತು. ನನ್ನ ಗಂಡ ಜಾನಪಾಲ, ನನ್ನ ಸಹೋದರಿ ಎಲಿಜಿಬತ್ , ನನ್ನ ಮಗ ಸ್ಟಿಫನ ಫೀಟರ ಮತ್ತು ಜೀಪ ಚಾಲಕ ಬಸವರಾಜ ಇವರುಗಳು ಗಾಯಗಳಿಂದಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತಾರೆ ಅಪಘಾತವಾದಾಗ ರಾತ್ರಿ ಸಮಯ 10-00 ಗಂಟೆಯಾಗಿತ್ತು. ಟ್ಯಾಂಕರ ಚಾಲಕನ ಅಪಘಾತದ ನಂತರ ಓಡಿ ಹೋಗಿರುತ್ತಾನೆ. ನಂತರ ಆಸ್ಪತ್ರೆಗೆ ನಮ್ಮನ್ನು

ಸೇರಿಸಿರುತ್ತಾರೆ. ಪೊಲಿಸರು ಆಸ್ಪತ್ರೆಗೆ ಬಂದು ದೂರು ಪಡೆದುಕೊಂಡಿರುತ್ತಾರೆ . ದೂರು ಮತ್ತು ದೂರಿನಲ್ಲಿನ ಸಹಿ ನೋಡಿ ಗುರುತಿಸಿದ್ದು , ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಅಪಘಾತವಾದ ಸುಮಾರು15-20 ದಿನಗಳ ನಂತರ ಪೊಲೀಸ ಠಾಣೆಯಲ್ಲಿ ಟ್ಯಾಂಕರ ಚಾಲಕನನ್ನು ನೋಡಿರುತ್ತೇನೆ.

ಆರೋಪಿ ಗೈರು ಹಾಜರು ಇದ್ದು ಆರೋಪಿಯನ್ನು ಗುರುತಿಸುವಿಕೆಗೆ ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನಿವೇದಿಸಿಕೊಂಡಿರುತ್ತಾರೆ.

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

<u>ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ</u>

ಅಪಘಾತದಿಂದಾಗಿ ಚಾಸಾಃ24 ರವರ ಕಟಿಂಗ್ ಶಾಪ್ ?ಹಾಳಾಗಿ ಸುಮಾರು 50,000/- ದಷ್ಟು ನಷ್ಟವಾಗಿರುತ್ತದೆ ಎಂದರೆ ಸರಿ. ಟ್ಯಾಂಕರ ಚಾಲಕನ ಹೆಸರು ಹಣಮಂತಪ್ಪ ತಂದೆ ಮಹಾದೇವಪ್ಪ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಜಿ ಬಿ ಆರ ವಕೀಲರಿಂದಃ</u>

ಗಾಜರಕೋಟ ಚರ್ಚಗೆ ನಾವು ಸಂಜೆಃ6-00 ಗಂಟೆಗೆ ಯಾದಗಿರಿಯಿಂದ ಹೋಗಿದ್ದೇವು. ಜೀಪನಲ್ಲಿ ಮಕ್ಕಳನ್ನು ಸೇರಿಸಿ ಒಟ್ಟು ಹತ್ತು ಜನ ಇದ್ದೆವು. ಸದರಿ ಜೀಪನಲ್ಲಿ 5 ಕ್ಕಿಂತ ಹೆಚ್ಚಿ ಗೆ ಜನರಿಗೆ ಕೂಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜೀಪನ್ನು ಬಸವರಾಜ ಎನ್ನುವವರು ಚಲಾಯಿಸುತ್ತಿದ್ದರು ಆತನು ಸಹ ಮೃತ ಪಟ್ಟಿರುತ್ತಾನೆ. ಜೀಪ ಚಾಲಕನ ಚಾಲನಾ ಪರವಾನಿಗೆ ಮತ್ತು ವಿಮೆ ಇತ್ತು .ಜೀಪನ ಚಾಲಕ ಆ ಮೊದಲು ನಮಗೆ ಪರಿಚಯ ಇರಲಿಲ್ಲ. ಗಾಜರಕೋಟಿನಿಂದ ವಾಪಸ್ಸು ಅರಕೇರಾ ಮಾರ್ಗವಾಗಿ ಬಂದಿರುತ್ತೇವೆ. ಹೈದ್ರಾಬಾದ ಯಾದಗಿರಿ ರಸ್ತೆ ರಾಷ್ಟ್ರಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ಆಶನಾಳ ಮುಂಡರಗಿ ಗೇಟ ಹತ್ತಿರ ರಸ್ತೆ ವಿಭಜಕ ಇರುತ್ತವೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಬಹಳಷ್ಟು ವಾಹನ ಸಂದಣಿ ಇರುತ್ತದೆ ಎಂದರೆ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿದಿರುತ್ತಾರೆ. ವಾಹನ ಸಂದಣಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುಗಡೆಯಿಂದ ರಾತ್ರಿ ಸಮಯದಲ್ಲಿ ದೊಡ್ಡ ವಾಹನದ ಬೆಳಕಿನಲ್ಲಿ ಸಣ್ಣ ವಾಹನಗಳಿಗೆ ರಸ್ತೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಜೀಪನ ಮಧ್ಯದಲ್ಲಿ ಕುಳಿತಿದ್ದೆ. ನನ್ನ ಆಜುಬಾಜು ನನ್ನ ಸಹೋದರಿಯರ ಮಕ್ಕಳು ಕುಳಿತ್ತಿದ್ದರು. ಮೃತ ನನ್ನ ಮಗ ನನ್ನ ಹಿಂದುಗಡೆ ಕುಳಿತ್ತಿದ್ದ. ನನ್ನ ಗಂಡನು ಸಹ ನನ್ನ ಹಿಂದುಗಡೆ ಕುಳಿತ್ತಿದ್ದ. ರಸ್ತೆ ಬಹಳಷ್ಟು ಅಗಲ ಇದ್ದು ಜೀಪನ ಚಾಲಕನೆ ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವು ಟ್ಯಾಂಕರ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಆನಂದಪ್ಪ ಟ್ಯಾಂಕರ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಜೀಪನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಮತ್ತು ವಿಮೆ ಇರಲಿಲ್ಲ. ಆದ್ದರಿಂದ ಟ್ಯಾಂಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿಯನ್ನು ಪೊಲಿಸ ಠಾಣೆಗೆ ಪೊಲೀಸರು ಕರೆದುಕೊಂಡು ಬಂದಿರುತ್ತಾರೆ . ಆರೋಪಿಯನ್ನು ಪೋಲಿಸ ಠಾಣೆಯಲ್ಲಿ ನೋಡುವುದಕ್ಕಿಂತ ಮುಂಚೆ ಎಲ್ಲಿಯೂ ನೋಡಿರುವುದಿಲ್ಲ. ಪೊಲಿಸರು ಹೇಳಿದ್ದರಿಂದ ಆರೋಪಿಯ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಅಪಘಾತದ ನಂತರ ಅಪಘಾತದ ಸ್ಥಳಕ್ಕೆ ಪೊಲೀಸರು ನನ್ನನ್ನು ಕರೆದಿದ್ದರು. ಅಪಘಾತವು ನಾವು ಬರುತ್ತಿದ್ದ ರಸ್ತೆಯ ಬಲಭಾಗದಲ್ಲಿ ಆಗಿರುತ್ತದೆ. ಅಪಘಾತದ ಪರಿಹಾರ ಪಡೆಯುವ ಸಲುವಾಗಿ ಟ್ಯಾಂಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಲನಾ ಪರವಾನಿಗೆ ಇರುವ ವ್ಯಕ್ತಿಯನ್ನು ಲಾರಿಯ ಚಾಲಕನನ್ನಾಗಿ ಸೇರಿಸಲು ಒತ್ತಾಯಿಸಿ ಆರೋಪಿಯನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿ ತಪ್ಪಿನಿಂದ ಆಗಿರುವುದಿಲ್ಲ ಎಂದೆರ ಸರಿಯಲ್ಲ. ಆರೊಪಿ ಅಪಘಾತದ ದಿನ ಟ್ಯಾಂಕರ ಚಾಲನೆ ಮಾಡಿರುವುದಿಲ್ಲ ಮತ್ತು ಅಪಘಾತ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.